

ಸರ್ಕಾರಿ ಪ್ರಾಧಿಕಾರದಿಂದ ಮನ್ನಣೆ

ಈ ಕೆಳಗೆ ತಿಳಿಸಿರುವ ಕ್ರಮಮಗಳನ್ನು ಅನುಸರಿಸುವ ಮೂಲಕ ಯಶಸ್ವಿ ಸಂರಕ್ಷಣಾ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ.

- ಉಳಿದಿರುವ ದೇವರಕಾಡುಗಳ ಬಗ್ಗೆ ಸ್ಥಳೀಯ ಮಟ್ಟದಲ್ಲಿ ಮಾಹಿತಿ ಸಂಗ್ರಹಣೆ
- ದೇವರಕಾಡಿನ ಸಂರಕ್ಷಣೆಯ ಬಗ್ಗೆ ಸ್ಥಳೀಯ ಜನರಲ್ಲಿ ಮತ್ತು ಅಧಿಕಾರಿಗಳಲ್ಲಿ ಜಾಗೃತಿ ಮೂಡಿಸುವುದು.
- ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವನಿಟ್ಟಿನಲ್ಲಿ ಪರಂಪರಾಗತವಾಗಿ ನೆಡೆದುಕೊಂಡುಬಂದ ಆಚರಣೆಗಳನ್ನು ಮತ್ತೆ ಮೈಗೂಡಿಸಿಕೊಳ್ಳುವುದು
- ಹೊಸತಲೆಮಾರಿನ ಜನರಿಗೆ ಈ ಹಳೆಯ ಆಚರಣೆಯನ್ನು ರೂಢಿಸಿಕೊಳ್ಳುವಂತೆ ಪ್ರೇರೇಪಿಸುವುದು
- ಈಗಿರುವ ದೇವರಕಾಡುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ
- ಕಾನೂನುಗಳ ಬಲಪಡಿಸುವಿಕೆ

ವಿನ್ಯಾಸ – ಅರುಣ್ ಡಿಟಿ

**ಸಂಘಟನೆಗಳು -**

- ಶಕ್ತಿ ಮತ್ತು ತರಿ ಸಂಶೋಧನಾ ತಂಡ, ಜೀವ ಪರಿಸರ ಶಾಸ್ತ್ರ ವಿಭಾಗ, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು
- ಅರಣ್ಯ ಮಹಾವಿದ್ಯಾಲಯ, ಬನವಾಸಿ ರಸ್ತೆ, ಶಿರಸಿ
- ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೊಡಗು
- ಪಶ್ಚಿಮ ಘಟ್ಟ ಕಾರ್ಯಪಡೆ, ಕರ್ನಾಟಕ ಸರ್ಕಾರ
- ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ, ಭಾರತ ಸರ್ಕಾರ

**ಕೆಲವು ಉಪಯುಕ್ತ ಕೊಂಡಿಗಳು –**

- ಸಿ ಪಿ ಆರ್ ಇ ಇ ದೇವರಕಾಡಿನ ಮೂಲಗಳು
  http://www.ecoheritage.cpreec.org/Viewcontall.php?$mFiHPEyWNks6UXr4nWz
- ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಸಿಗುವ ದೇವರಕಾಡು ಮತ್ತು ದೇವರಕಾಡಿನ ಮರಗಳು
  http://www.ignca.nic.in/cd_08008.htm
- ದೇವರಕಾಡು: ಪ್ರಾಚೀನ ಕಾಲದ ಪ್ರಕೃತಿ ಸಂರಕ್ಷಣಾ ಸಂಪ್ರದಾಯ
  http://wgbis.ces.iisc.ernet.in/biodiversity/sahyadri_enews/newsletter/issue32/index.htm
- ಚಿರಾಪುಂಜಿಯಲ್ಲಿನ ದೇವರಕಾಡುಗಳಲ್ಲಿ ಕಾಣಸಿಗುವ ವೈವಿಧ್ಯ ಪಕ್ಷಿಸಂಕುಲ
  http://www.aaranyak.org/Reports/Birds%20of%20Cherrapunjee%20Final%20Technical%20Report.pdf
- ಪಶ್ಚಿಮ ಬಂಗಾಳದ ದೇವರಕಾಡುಗಳು: ಅರಣ್ಯ ನಿರ್ವಹಣೆಯಲ್ಲಿ ಜನಸಮುದಾಯದ ಒಂದು ಮಾದರಿ
  http://www.cintdis.org/images/PDF/SG-UEA.pdf
- ಪಾವಿತ್ರ್ಯದ ಆಯಾಮಗಳು: ಸಂರಕ್ಷಿತ ಪ್ರದೇಶಗಳ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ತಿಳುವಳಿಕೆ
  http://cmsdata.iucn.org/downloads/sacredheritagesites2.pdf

# ದೇವರಕಾಡು


## ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸ್ಥಳೀಯ ಜನರ ಸಹಭಾಗಿತ್ವ



ಜೀವ ಪರಿಸರ ಶಾಸ್ತ್ರ ವಿಭಾಗ
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು

## ದೇವರಕಾಡು - ಇದು ನಮ್ಮ ಪೂರ್ವಜರಿಂದ ನಮಗೆ ಬಂದ ಬಳುವಳಿ

ದೇವರಕಾಡು ನಮ್ಮ ಗ್ರಾಮೀಣ ಬದುಕಿನ ಒಂದು ಮುಖ್ಯವಾದ ಭಾಗ. ಸ್ಥಳೀಯ ದೇವ- ದೇವಿಯರನ್ನ ಇಲ್ಲಿ ಪೂಜಿಸುವ ಕಾರಣದಿಂದ ದೇವರಕಾಡುಗಳನ್ನ ಪವಿತ್ರ ಸ್ಥಳಗಳೆಂದು ಪರಿಗಣಿಸಲಾಗುತ್ತದೆ. ದೇವರಕಾಡುಗಳೆಂದರೆ ದೇವರ ಹೆಸರಿನಲ್ಲಿ ಸಂರಕ್ಷಿಸಲ್ಪಟ್ಟ ಅರಣ್ಯಗಳು ಅಥವಾ ವೃಕ್ಷಗಳ ಸಮೂಹ. ಇವು ತುಂಬಾ ಪ್ರಾಚೀನಕಾಲದಿಂದಲೂ ಅಸ್ತಿತ್ವದಲ್ಲಿವೆ. ನಮ್ಮ ಜನಪದ ಹಾಡು, ಸಾಹಿತ್ಯ ಮತ್ತು ಆಚರಣೆಗಳಲ್ಲಿ ದೇವರಕಾಡುಗಳ ಬಗ್ಗೆ ಉಲ್ಲೇಖಗಳಿವೆ. ಪಶ್ಚಿಮಘಟ್ಟಗಳ ಮಧ್ಯ ಭಾಗದಲ್ಲಿರುವ ಉತ್ತರಕನ್ನಡ ಜಿಲ್ಲೆಯಲ್ಲಿ ದೇವರಕಾಡುಗಳು ಬೇರೇ ಬೇರೇ ಹೆಸರುಗಳಿಂದ ಕರೆಯಲ್ಪಡುತ್ತವೆ, ಉದಾಹರಣೆಗೆ- ಭೂತಪ್ಪನ ಬನ, ಬೀರಪ್ಪನ ಬನ, ಯಕ್ಷೀ ಬನ, ಮಾರಮ್ಮನ ಬನ, ನಾಗರ ಬನ. ಈ ಎಲ್ಲ ಬನಗಳಲ್ಲಿ ದೇವತೆಗಳಾದ ಭೂತಪ್ಪ, ಬೀರಪ್ಪ, ಯಕ್ಷಿ, ಮಾರಮ್ಮ ಮತ್ತು ನಾಗದೇವತೆಗಳು ಕ್ರಮವಾಗಿ ಪೂಜಿಸಲ್ಪಡುತ್ತಾರೆ.


ನಾಗ ದೇವತಾ


ಚೌಡಮ್ಮ

ದೇವರಕಾಡು ಹಳ್ಳಿಯ ಸಾಮಾಜಿಕ ಮತ್ತು ಧಾರ್ಮಿಕ ಬದುಕಿನಲ್ಲಿ ಮಹತ್ವದ ಪಾತ್ರವನ್ನ ವಹಿಸುತ್ತದೆ. ಇದು ಹಬ್ಬ ಹರಿದಿನ ಮತ್ತು ಇತರ ಉತ್ಸವಗಳ ಸಮಯದಲ್ಲಿ ಹಳ್ಳಿಯ ಜನರೆಲ್ಲ ಒಟ್ಟಿಗೆ ಬೆರೆಯುವ ಸ್ಥಳವಾಗಿದ್ದು ಮನುಷ್ಯ ಮನುಷ್ಯರ ನಡುವಿನ ಸಂಬಂಧವನ್ನ ಬಲಗೊಳಿಸುತ್ತದೆ.

## ದೇವರಕಾಡು ಮತ್ತು ನಮ್ಮ ಜೀವನ

ದೇವರಕಾಡು ನಮ್ಮ ಜೀವನಾಧಾರಕ್ಕೂ ಕೂಡ ಬಹಳ ಅಗತ್ಯ. ಇಂದು ದೇವರಕಾಡುಗಳು ವಿನಾಶದತ್ತ ಸಾಗುತ್ತಿವೆಯಾದರೂ ಕೂಡಾ ಬಹಳಷ್ಟು ಸ್ಥಳೀಯ ಪ್ರಾಣಿ ಮತ್ತು ಸಸ್ಯಗಳಿಗೆ ಆವಾಸ ಸ್ಥಾನಗಳಾಗಿವೆ. ಆದಕಾರಣದಿಂದಲೇ ಸ್ಥಳೀಯ ಜೀವವೈವಿಧ್ಯ ಸಂರಕ್ಷಿಸುವಲ್ಲಿ ಇವುಗಳ ಪಾತ್ರ ಬಹಳ ಮಹತ್ವದ್ದು. ಹಾಗೆಯೇ ಆರ್ಥಿಕವಾಗಿಯೂ ಬಹಳ ಮುಖ್ಯವಾದ ಕೆಲವು ಸಸ್ಯಜನ್ಯ ವಸ್ತುಗಳಾದ- ಔಷಧಿ ಸಸ್ಯಗಳು, ಕಿರು ಅರಣ್ಯ ಉತ್ಪನ್ನಗಳು, ಉರುವಲು ಮತ್ತು ತರಗೆಲೆ ಗೊಬ್ಬರಗಳ ಆಗರ ದೇವರಕಾಡು. ಸ್ಥಳೀಯ ಜನಜೀವನದ ಮೇಲೆ ನೇರವಾಗಿ ಪರಿಣಾಮ ಬೀರಬಲ್ಲ ಜೀವಪರಿಸರ ವ್ಯವಸ್ಥೆಯ ಬಹುಮುಖ್ಯ ಕ್ರಿಯೆಗಳಾದ ಮಣ್ಣು ಮತ್ತು ನೀರಿನ ಸಂರಕ್ಷಣೆ, ಪೋಷಕಾಂಶ ಮತ್ತು ವಾತವರಣಗಳ ನಿರ್ವಹಣೆ, ಪರಾಗಸ್ಪರ್ಶ, ಕೀಟಗಳ ನಿಯಂತ್ರಣ ಮುಂತಾದವುಗಳನ್ನ ದೇವರಕಾಡುಗಳು ಬಹಳ ವ್ಯವಸ್ಥಿತವಾಗಿ ನಿರ್ವಹಿಸುತ್ತವೆ.


ಪರಾಗಸ್ಪರ್ಶ


ಉರುವಲು ಸಂಗ್ರಹ

## ದೇವರಕಾಡುಗಳಿಗಿರುವ ಅಪಾಯಗಳು

ತಲೆತಲಾಂತರಗಳಿಂದ ನಡೆದುಕೊಂಡುಬಂದ ಈ ಪ್ರಕೃತಿ ಸಂರಕ್ಷಣಾವಿಧಾನವು ಇಂದು ತೀವ್ರಗತಿಯಲ್ಲಿ ಬದಲಾಗುತ್ತಿದೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ದೇವರಕಾಡುಗಳನ್ನ ಸಂರಕ್ಷಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದ, ನಮ್ಮ ಸಾಮಾಜಿಕ ಸಂರಚನೆ ಮತ್ತು ಪರಂಪರಾಗತವಾಗಿ ಬೆಳೆದುಬಂದ ನಂಬಿಕೆಯ ಕ್ರಮದಲ್ಲಿ ಆಗುತ್ತಿರುವ ಶೀಘ್ರಗತಿ ಮತ್ತು ಮಹತ್ತರವಾದ ಬದಲಾವಣೆ, ಜನಸಂಖ್ಯೆಯ ಹೆಚ್ಚಳ, ಕೃಷಿಕ್ಷೇತ್ರಗಳ ವಿಸ್ತರಣೆ ಮತ್ತು ದೂರದೃಷ್ಟಿಯಿಲ್ಲದ ಅಭಿವೃದ್ಧಿ ಕೆಲಸಗಳು. ಈ ಕೆಳಗಿನ ಅಂಶಗಳ ಮೂಲಕ ದೇವರಕಾಡುಗಳಲ್ಲಾಗುತ್ತಿರುವ ಬದಲಾವಣೆಗಳನ್ನ ಮನಗಾಣ ಬಹುದು

- ಪ್ರಕೃತಿ ಕೇಂದ್ರಿತವಾಗಿದ್ದ ನಮ್ಮ ಧಾರ್ಮಿಕ ಆಚರಣೆಗಳು ಇಂದು ಮೂರ್ತಿಕೇಂದ್ರಿತ ಮತ್ತು ದೇವಸ್ಥಾನ ಕೇಂದ್ರಿತವಾಗುತ್ತಿರುವುದು
- ಅರಣ್ಯ ಒತ್ತುವರಿ (ಕೃಷಿ ಭೂಮಿ / ಅಡಿಕೆ / ಬಾಳೆ / ವಸತಿಗಾಗಿ)
- ಕಳೆ ಸಸ್ಯಗಳ ಸಮಸ್ಯೆ
- ದೇವರಕಾಡುಗಳನ್ನ ನಿರ್ಲಕ್ಷಿಸಿರುವುದು ಮತ್ತು ಸರಿಯಾಗಿ ನಿರ್ವಹಿಸದೇ ಇರುವುದು
- ಕಟ್ಟಡಗಳ ನಿರ್ಮಾಣ (ಆಧುನಿಕ ದೇವಾಲಯಗಳು)


ಅರಣ್ಯ ಒತ್ತುವರಿ


ಕಳೆ ಸಸ್ಯಗಳು

## ದೇವರಕಾಡುಗಳ ಸಂರಕ್ಷಣೆ

ಕಳೆದ ಕೆಲವು ವರ್ಷಗಳಿಂದ ದೇವರಕಾಡುಗಳನ್ನ ಸಂರಕ್ಷಿಸುವ ಕಾರ್ಯ ಬಹಳಷ್ಟು ವೇಗಪಡೆದು ಕೊಂಡಿದೆ. ಸರ್ಕಾರಿ ಸಂಸ್ಥೆಗಳು, ಪರಿಸರ ವಾದಿಗಳು ಮತ್ತು ವಿಜ್ಞಾನಿಗಳು ದೇವರಕಾಡುಗಳ ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಮಹತ್ವವನ್ನ ಗುರುತಿಸಿದ್ದಾರೆ. ದೇವರಕಾಡುಗಳು ಸಮುದಾಯ ಆಧಾರಿತ ಸಂರಕ್ಷಣಾವಿಧಾನಕ್ಕೆ ಉತ್ತಮ ಉದಾಹರಣೆ.